Sept 2021- ವಿತ್ತಸಂಚಿಕೆ

# INSPIRE INDIA

ಸಲಹೆ ನಮ್ಮದು ಹೂಡಿಕೆ ನಿಮ್ಮದು




ಶರಣ್ ಪಾಟೀಲ್
ಆರ್ಥಿಕ ತಜ್ಞ

INSPIRE INDIA WEALTH PVT LTD., No.119, IInd Floor, Above HDFC Bank, Gandhi Bazar Main Road, Basavangudi, Bangalore - 560004, Ph: +91 8042129917, 9035414414. **Mail:** info@inspireindiafs.com Website: www.inspireindiafs.com



“ **ಯಾ**ರಿಗೆ ತಮ್ಮ ಭಾವನೆಗಳನ್ನು ನಿಭಾಯಿಸಲು ಸಾಮರ್ಥ್ಯವಿರುವುದಿಲ್ಲವೋ ಅವರು ಹೂಡಿಕೆ ಪ್ರಕ್ರಿಯೆಯಿಂದ ಲಾಭ ಗಳಿಸುವ ಅರ್ಹತೆಯನ್ನು ಹೊಂದಿರುವುದಿಲ್ಲ.

–ಬೆಂಜಮಿನ್ ಗ್ರಹಾಂ



“ **ನ**ನ್ನ ಯೋಚನೆಗಳು ನನಗೆ ದೊಡ್ಡ ಮಟ್ಟಿನ ಹಣ ಸಂಪಾದನೆ ಮಾಡಿಕೊಡಲಿಲ್ಲ. ಬದಲಾಗಿ ನಾನು ಸಂಯಮದಿಂದ ಕುಳಿತಿರುವುದರಿಂದಲೇ ನನಗೆ ಹಣ ಸಂಪಾದನೆ ಸಾಧ್ಯವಾಯಿತು.

–ಜಸ್ಸೇ ಲಿವರ್‌ಮೋರ್



“ ಒಬ್ಬ ಹೂಡಿಕೆದಾರನಿಗೆ ಇರಬೇಕಾದ ಒಂದೇ ಒಂದು ಬಹುದೊಡ್ಡ ಸಾಮರ್ಥ್ಯ ಏನೆಂದರೆ ಸುದೀರ್ಘಾವಧಿ ದೃಷ್ಟಿಕೋನವನ್ನು ಹೊಂದಿರುವುದು.

–ಸೇಥ್ ಕ್ಲಾರ್ಮನ್

# ಹೂಡಿಕೆದಾರರಿಗೆ ಇರಬೇಕು ಕಾಲಾತೀತ ಪರಿಜ್ಞಾನ



**ಹಣಕಾಸು ವಿಚಾರ ಎನ್ನುವುದು ನಿರಂತರ ಹುಡುಕಾಟ. ಒಂದು ಹೂಡಿಕೆಯನ್ನು ಮಾಡಿ ನೀವು ಮೈಮರೆತು ಕುಳಿತುಕೊಳ್ಳುವಂತಿಲ್ಲ. ನೀವು ಇಡುವ ಪ್ರತಿಯೊಂದು ಹೆಜ್ಜೆಯೂ ಕೂಡ ಎಚ್ಚರಿಕೆಯ ನಡೆ. ಸಂಪತ್ತಿನ ಸೌಧವನ್ನು ಕಟ್ಟಲು ಹೊರಟವರಿಗೆ ಹುಡುಕಾಟಕ್ಕೆ, ವಿವೇಚನಾಯುತ ನಿರ್ಧಾರಕ್ಕೆ ಕಾಲದ ಮಿತಿ ಇರುವುದಿಲ್ಲ.**

ಅನುಭವ ಮಾತ್ರದಿಂದ ಏನನ್ನಾದರೂ ಮಾಡುವುದು ಸಾಧ್ಯವಾಗಿದ್ದಿದ್ದರೆ ಹೂಡಿಕೆದಾರರು ತಮ್ಮ ಸಾಮರ್ಥ್ಯವನ್ನೇ ಕಡೆಗಣಿಸುವ ನಿರ್ಧಾರಗಳಿಂದ ಮಾಡಿದ ಹೂಡಿಕೆಗಳ ಮೂಲಕ ಭಾರೀ ಮೊತ್ತದ ಲಾಭಗಳನ್ನು ಗಳಿಸಬಹುದಿತ್ತು. ಆದರೆ, ಇದಕ್ಕೆ ನಿಶ್ಚಿತವಾಗಿ ಅಪವಾದಗಳೂ ಇವೆ. ಸಂಪತ್ತನ್ನು ಸೃಷ್ಟಿಸುವ ಕೆಲವು ಸರಳ ಸಿದ್ಧಾಂತಗಳನ್ನು ಅನುಸರಿಸುವುದರ ಮೂಲಕ ತಮ್ಮ ಜೀವನದಲ್ಲಿ ಐಶ್ವರ್ಯದ ಸೌಧವನ್ನು ಕಟ್ಟಿದ ಗೌರವಾನ್ವಿತ ಹೂಡಿಕೆದಾರರು ನಮ್ಮ ನಡುವೆ ಇದ್ದಾರೆ ಎನ್ನುವುದು ಹೆಮ್ಮೆ. ಇಂತಹ ಹೂಡಿಕೆದಾರರ ಅನುಭವಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತದೆ. ಆದರೆ ಕಾರ್ಯರೂಪಕ್ಕೆ ತರುವುದು ಅಪರೂಪ. ಈ ಬಾರಿಯ ಸಂಚಿಕೆಯಲ್ಲಿನ ಈ ಲೇಖನದಲ್ಲಿ, ಹೂಡಿಕೆ ಮಾಡುವ ಮೂಲಕ ಯಶಸ್ವಿಯಾಗಲು ಬಯಸುವ ಹೂಡಿಕೆದಾರರಿಗೆ ಕಾಲಾತೀತವಾದ ಕೆಲವು ವಿವೇಚನೆಯ ಸಂಗತಿಗಳನ್ನು ನಾವು ಹೇಳಲು ಬಯಸುತ್ತೇವೆ.

**ಜ್ಞಾನ ಕಲಿಕೆ ಮತ್ತು ಗಳಿಕೆ:** “ನಿದ್ದೆಯಿಂದ ಎದ್ದೇಳುವಾಗಿನ ಲವಲವಿಕೆಗಿಂತ ಹೆಚ್ಚು ಹುರುಪಿನಿಂದ ನಿದ್ದೆಗೆ ತೆರಳು”

–ಚಾರ್ಲಿ ಮುಂಗರ್

ಯಾವುದೇ ಒಬ್ಬ ನಿಜವಾದ ಹೂಡಿಕೆದಾರ ಹಣಕಾಸು ವಿಚಾರದಲ್ಲಿ ಎಷ್ಟು ಓದಿದರೂ ಮತ್ತು ಎಷ್ಟು ಕಲಿತರೂ ಅದು ಕಡಿಮೆಯೇ. ವ್ಯಾಪಾರದ ಬಗ್ಗೆ, ಉದ್ದಿಮೆ ಬಗ್ಗೆ ಇನ್ನಷ್ಟು ಮತ್ತಷ್ಟು ತಿಳಿದುಕೊಳ್ಳುವುದು, ಆ ಬಗ್ಗೆ ನಿರಂತರ ಹುಡುಕಾಟ ನಡೆಸುವುದು ಮುಗಿಯದ ಸಾಹಸ. ಈಗಾಗಲೇ ಯಾರಾದರೂ ಆ ಕೆಲಸವನ್ನು ಮಾಡುತ್ತಿದ್ದರೂ ಕೂಡ ಅದು ನಿರಂತರ ಪ್ರಕ್ರಿಯೆ. ಯಾರು ನೇರವಾಗಿ ‘ಷೇರು’ಗಳಲ್ಲಿ ಹೂಡಿಕೆ ಮಾಡುವ ನಿರ್ಧಾರಗಳನ್ನು ತಾವಾಗಿಯೇ ಕೈಗೊಳ್ಳುತ್ತಾರೋ ಅಂತವರು ಇಂತಹ ನಿರಂತರ ಕಲಿಕೆಯಲ್ಲಿ ತೊಡಗಿಕೊಳ್ಳಬೇಕು ಎಂಬುದು ಅಪೇಕ್ಷಿತ. ಆದರೆ ಸಣ್ಣಪುಟ್ಟ ಹೂಡಿಕೆದಾರರಿಗೆ ಆರ್ಥಿಕ ಆವರ್ತನಗಳು, ಕೈಗಾರಿಕೆಗಳು ಮತ್ತು ಕಂಪನಿಗಳನ್ನು ಅರ್ಥ ಮಾಡಿಕೊಳ್ಳಲು ಇದೇ ರೀತಿಯ ಸಮಯ ಮತ್ತು ಕುಶಾಗ್ರತೆ ಇರುವುದಿಲ್ಲ. ಅವರು ಇಂತಹ ಸಂಗತಿಗಳನ್ನು ಫಂಡ್ ನಿರ್ವಹಣೆದಾರರಿಗೆ ಹೊರಗುತ್ತಿಗೆಯನ್ನು ಕೊಟ್ಟು ಹೂಡಿಕೆ ಹೇಗೆ ಮಾಡಬೇಕು ಎನ್ನುವುದಕ್ಕಷ್ಟೇ ಗಮನ ಹರಿಸುತ್ತಾರೆ. ಹಾಗಿದ್ದೂ ಮಾರುಕಟ್ಟೆ, ಆಸ್ತಿಯ ವರ್ಗಗಳು, ಉತ್ಪನ್ನಗಳು, ಹೂಡಿಕೆ ಕಾರ್ಯತಂತ್ರಗಳು ಮತ್ತು ಸಂಪತ್ತು ಸೃಷ್ಟಿಯ ಸಿದ್ಧಾಂತಗಳ ಬಗ್ಗೆ ಅರಿತುಕೊಳ್ಳಬೇಕು ಎಂಬ ತುಡಿತವನ್ನು ಎಲ್ಲ ಹೂಡಿಕೆದಾರರಿಂದಲೂ ನಿರೀಕ್ಷಿಸಬೇಕಾಗುತ್ತದೆ.

**ರಿಸ್ಕ್ ಇಲ್ಲದ ಜೀವನ...** “ಬಳಪದಿಂದ ಚಿತ್ರವನ್ನು ರೂಪಿಸಲು ಸಾಧ್ಯವಿಲ್ಲದೇ ಇರುವ ಯಾವುದೇ ಐಡಿಯಾದಲ್ಲಿ ಎಂದಿಗೂ ಹೂಡಿಕೆಯನ್ನು ಮಾಡಬೇಡಿ” –ಪೀಟರ್ ಲಿಂಚ್.

‘ರಿಸ್ಕ್’ ಎಂಬ ಕಾಲಂ ಬಗ್ಗೆ ನಾವು ಸಾಮಾನ್ಯವಾಗಿ ಹೆಚ್ಚು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಇದರ ಬಗ್ಗೆ ಶಾಲೆ ಮತ್ತು ಕಾಲೇಜುಗಳಲ್ಲಿಯೂ ಕಲಿಸಿರುವುದಿಲ್ಲ. ಹಾಗಿದ್ದರೂ ನಾವು ಮಾಡುವ ಎಲ್ಲ ಸಾಹಸಗಳಲ್ಲಿಯೂ ಮತ್ತು ಜೀವನದ ಎಲ್ಲ ಆಯಾಮಗಳಲ್ಲಿಯೂ ರಿಸ್ಕ್ ಇದ್ದೇ ಇರುತ್ತದೆ. ಏನನ್ನೂ ಮಾಡದೇ ಸುಮ್ಮನಿರುವುದರಲ್ಲಿಯೂ ರಿಸ್ಕ್ ಇದೆ. ಅಷ್ಟು ಮಾತ್ರವಲ್ಲದೆ ನೀವು ಒಂದಲ್ಲ ಇನ್ನೊಂದು ಕೆಲಸ ಮಾಡಲು ನಿರ್ಧಾರ ಮಾಡಿದಾಗಲೂ ರಿಸ್ಕ್ ಇದ್ದೇ ಇರುತ್ತದೆ. “ರಿಸ್ಕ್ ಜಾಸ್ತಿ ಇದ್ದಷ್ಟೂ ಆದಾಯವೂ ಜಾಸ್ತಿ” ಎಂಬ ತಪ್ಪು ಕಲ್ಪನೆಯೂ ಇದೆ. ನಾವು ಸುದೀರ್ಘಾವಧಿಯ ಹೂಡಿಕೆ, ಬಂಡವಾಳದ ವಿತರಣೆ ಅಥವಾ ನಾನಾ ಉದ್ಯಮಗಳಲ್ಲಿ ಹೂಡಿಕೆ ಮಾಡುವುದು ಮತ್ತು ಹೂಡಿಕೆಯಲ್ಲಿನ ಶಿಸ್ತಿನ ಬಗ್ಗೆ ಯಾವತ್ತೂ ಮಾತನಾಡುತ್ತಿರುತ್ತೇವೆ. ಹಾಗಂತ ನಾವು ಕಡಿಮೆ ರಿಸ್ಕ್ ಮತ್ತು ಹೆಚ್ಚು ಆದಾಯದ ಬಗ್ಗೆ ಯಾವತ್ತಾದರೂ ಮಾತನಾಡುತ್ತೇವೆಯೇ? ಅತಿ ಹೆಚ್ಚು ರಿಸ್ಕ್ ಇರುವುದು ಮಾರುಕಟ್ಟೆ ಅಥವಾ ಹೂಡಿಕೆ ಅಥವಾ ಉತ್ಪನ್ನಗಳಿಂದ ಅಲ್ಲ. ಬದಲಾಗಿ, ನಮ್ಮ ಹೂಡಿಕೆಯ ನಡವಳಿಕೆ ಮತ್ತು ನಮ್ಮ ನಿರ್ಧಾರಗಳಲ್ಲಿ. ನಾವು ಹೆಚ್ಚು ಕಲಿಯುತ್ತ, ಅರ್ಥ ಮಾಡಿಕೊಳ್ಳುತ್ತ ಮತ್ತು ಅನುಭವವನ್ನು ಪಡೆದುಕೊಳ್ಳುತ್ತ ಹೋದ ಹಾಗೆ ನಾವು ಎದುರಿಸುವ ರಿಸ್ಕ್‌ಗಳ ಬಗ್ಗೆ ಮತ್ತು ನಮ್ಮ ನಿರ್ಧಾರಗಳ ಬಗ್ಗೆ ನಮ್ಮ ಅರ್ಥ ವ್ಯಾಪ್ತಿ ಹೆಚ್ಚುತ್ತ ಹೋಗುತ್ತದೆ.



## ತಪ್ಪುಗಳನ್ನು ತಪ್ಪಿಸಿ

"ನಾನು ಯಾವಾಗ ತಪ್ಪು ಮಾಡುತ್ತೇನೆ ಎಂಬುದು ನನಗೆ ಗೊತ್ತಿದೆ, ಅದಕ್ಕೆ ನಾನು ಶ್ರೀಮಂತ" –ಜಾರ್ಜ್ ಸೋರೋಸ್

ಯಶಸ್ವೀ ಹೂಡಿಕೆದಾರರು ದೊಡ್ಡದೊಡ್ಡ ಐಡಿಯಾಗಳ ಬಗ್ಗೆ ಹೆಚ್ಚು ಗಮನವಿಡುವುದಿಲ್ಲ. ಬದಲಾಗಿ ದುಬಾರಿ ಎನಿಸುವ ತಪ್ಪುಗಳನ್ನು ನಿವಾರಣೆ ಮಾಡುವುದು ಹೇಗೆ ಎನ್ನುವ ಕಡೆಗೆ ಹೆಚ್ಚು ಗಮನ ಹರಿಸುತ್ತಾರೆ. ನಿಮ್ಮ ತಪ್ಪುಗಳು ಕಡಿಮೆಯಾದಷ್ಟೂ ನಿಮ್ಮ ಗಳಿಕೆ ಮತ್ತು ಪ್ರಗತಿಯ ಕಡೆಗೆ ನಿಮ್ಮ ಹೆಜ್ಜೆ ದೊಡ್ಡದಾಗುತ್ತ ಹೋಗುತ್ತದೆ ಎಂಬುದು ಖಚಿತ. ಅದು ಚಿಕ್ಕದಾಗಿದ್ದರೂ ಕೂಡ ಸವೆದು ಹೋಗುವುದಿಲ್ಲ ಅಥವಾ ಕರಗಿ ಹೋಗುವುದಿಲ್ಲ ಮತ್ತು ಸುದೀರ್ಘ ಕಾಲದ ತನಕ ಸುಸ್ಥಿರವಾಗಿರುತ್ತದೆ. ದುಬಾರಿ ತಪ್ಪುಗಳು ಸಂಪತ್ತಿನ ಭಾಗವನ್ನು ಕಡಿತಗೊಳಿಸುತ್ತದೆ ಮತ್ತು ನಮ್ಮ ಸುದೀರ್ಘಾವಧಿ ಸಂಪತ್ತು ಸೃಷ್ಟಿಯ ಸಾಧ್ಯತೆಗಳ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆ. ಅಂದ–ರೆ ಬೆಳೆಯುವ ಮರವನ್ನು ಪದೇ ಪದೇ ಕಡಿದು ಹಾಕುತ್ತ ಇನ್ನಷ್ಟು ಬೇಗ ಬೆಳೆಯುವಂತೆ ಪ್ರಾರ್ಥನೆ ಮಾಡಿದಂತೆ. ಹೂಡಿಕೆಯಲ್ಲಿನ ಒಂದು ಉತ್ತಮ ಸಂಗತಿ ಏನೆಂದರೆ ಇಲ್ಲಿ ನಿಮಗೆ ಅನೇಕ ದೊಡ್ಡದೊಡ್ಡ ಐಡಿಯಾಗಳೇನೂ ಬೇಕಾಗುವುದಿಲ್ಲ, ಬದಲಾಗಿ ನೀವು ಎಲ್ಲಿಯ ತನಕ ದೊಡ್ಡ ತಪ್ಪುಗಳನ್ನು ಮಾಡುವುದನ್ನು ತಪ್ಪಿಸುತ್ತೀರೋ ಅಲ್ಲಿಯ ತನಕ ಕೆಲವೇ ಕೆಲವು ಐಡಿಯಾಗಳು ಸಾಕಾಗುತ್ತವೆ.



## ಸುದೀರ್ಘಾವಧಿಯ ಯೋಚನೆ

"ಒಬ್ಬ ಹೂಡಿಕೆದಾರನಿಗೆ ಇರಬೇಕಾದ ಒಂದೇ ಒಂದು ಬಹುದೊಡ್ಡ ಸಾಮರ್ಥ್ಯ ಏನೆಂದರೆ ಸುದೀರ್ಘಾವಧಿ ದೃಷ್ಟಿಕೋನವನ್ನು ಹೊಂದಿರುವುದು" –ಸೇಥ್ ಕ್ಲಾರ್ಮನ್.

ಸಾಮಾನ್ಯವಾಗಿ ಸಣ್ಣಪುಟ್ಟ ಹೂಡಿಕೆದಾರರು ಅಲ್ಪಾವಧಿ ಪ್ರಗತಿಯ ಬಗ್ಗೆ ಹೆಚ್ಚು ಆಕರ್ಷಿತರಾಗುತ್ತಾರೆ. ಇತ್ತೀಚಿನ ಗೂಳಿಯ ಓಟ, ಐಪಿಓ ಗೀಳು ಈ ನಡವಳಿಕೆಯ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ. ಆದರೆ ಮಾರುಕಟ್ಟೆಯು ಸುದೀರ್ಘಾವಧಿಯಲ್ಲಿ ನಾನಾ ಆವರ್ತನಗಳೊಂದಿಗೆ ಮುಂದೆ ಚಲಿಸುತ್ತಿರುತ್ತದೆ. ಹಾಗಾಗಿ ಸುದೀರ್ಘ ಕಾಲಾವಧಿಗೆ ಅತ್ಯಂತ ಹೆಚ್ಚು ಅಲ್ಪಾವಧಿ ಪ್ರಗತಿ ಪ್ರಮಾಣವನ್ನು ನಿರೀಕ್ಷಿಸುವುದು ಮತ್ತು ಅದರಲ್ಲಿಯೇ ಸುಸ್ಥಿರತೆಯನ್ನು ಕಾಯ್ದುಕೊಳ್ಳುವುದು ಇನ್ನೊಂದು ಅಸಾಧ್ಯದ ಸಂಗತಿ. ಟ್ರೇಡಿಂಗ್, ಅಲ್ಪಾವಧಿ ಮಾರ್ಗ ಅನುಸರಿಸುವುದು, ಐಡಿಯಾಗಳಿಗೆ ಸದಾ ಹೊಂಚು ಹಾಕುವುದು ಇವೆಲ್ಲವೂ ಅಲ್ಪಾವಧಿಯ ಕಾರ್ಯಭಂಗಗಳಲ್ಲದೇ ಮತ್ತೇನೂ ಅಲ್ಲ. ಒಂದು ದಿನದಲ್ಲಿ ಶೇ.10ರಷ್ಟು ಲಾಭ ಅಥವಾ ನಷ್ಟ ಸುದೀರ್ಘಾವಧಿ ಹೂಡಿಕೆದಾರನಿಗೆ ಯಾವುದೇ ರೀತಿಯಲ್ಲಿ ಹಾನಿ ತರುವುದಿಲ್ಲ. ಅನುಭವಿ ಹಾಗೂ ಯಶಸ್ವೀ ಹೂಡಿಕೆದಾರ ಯಾವತ್ತೂ ಅಲ್ಪಾವಧಿ ಯೋಚನೆಯ ಕಾರ್ಯಭಂಗಗಳಿಂದ ಯಾವತ್ತೂ ದೂರ ಇರುತ್ತಾನೆ ಮತ್ತು ಕೇವಲ ಸುದೀರ್ಘಾವಧಿ ಪ್ರಗತಿ ಅವಕಾಶಗಳ ಬಗ್ಗೆ ಮಾತ್ರ ಗಮನ ಹರಿಸುತ್ತಾನೆ.

## ಕೆಲವೇ ಕೆಲವು ನಿರ್ಧಾರಗಳು ಸಾಕು

"ನನ್ನ ಯೋಚನೆಗಳು ನನಗೆ ದೊಡ್ಡ ಮಟ್ಟಿನ ಹಣ ಸಂಪಾದನೆ ಮಾಡಿಕೊಡಲಿಲ್ಲ. ಬದಲಾಗಿ ನಾನು ಸಂಯಮದಿಂದ ಕುಳಿತಿರುವುದರಿಂದಲೇ ನನಗೆ ಹಣ ಸಂಪಾದನೆ ಸಾಧ್ಯವಾಯಿತು" –ಜಸ್ಸೇ ಲಿವರ್‌ಮೋರ್.

ನಿಜವಾದ ಯಶಸ್ಸು ಯಾವತ್ತೂ ಸರಳತೆಯಿಂದ ಕೂಡಿರುತ್ತದೆ. ಹೂಡಿಕೆದಾರರು ವಿಷಯಗಳನ್ನು ಸರಳವಾಗಿ ಪರಿಗಣಿಸಿದರೆ ಅಂತಿಮವಾಗಿ ಅದರ ಚೆಲುವಿನಿಂದಲೇ ಅವರು ಬೆಳಗುತ್ತಾರೆ. ಯಾರು ದಡ್ಡರಂತೆ ವರ್ತಿಸಲು ಪ್ರಯತ್ನಿಸುವುದಿಲ್ಲವೋ ಅವರು ಬುದ್ಧಿವಂತರಾಗಲು ಪ್ರಯತ್ನಿಸುವ ಜನರಿಗಿಂತ ಅತ್ಯಪೂರ್ವವಾದ ಸುದೀರ್ಘಾವಧಿ ಪ್ರಯೋಜನವನ್ನು ಹೊಂದಿರುತ್ತಾರೆ ಎಂಬುದು ಇತಿಹಾಸವೇ ಕಲಿಸಿದ ಪಾಠ. ಆದರೆ ಸಹಜವಾದ ಸಂಗತಿ ಏನೆಂದರೆ, ನೀವು ಕಡಿಮೆ ಹೂಡಿಕೆ ನಿರ್ಧಾರಗಳನ್ನು ಕೈಗೊಂಡರೆ ಅವು ಬಹುತೇಕ ಸರಿಯಾದುದಾಗಿರುತ್ತವೆ. ನೀವು ಮಾಡುವ ಹೂಡಿಕೆಯ ವಿಧಾನದಲ್ಲಿಯೇ ಶಿಸ್ತನ್ನು ಕಾಯ್ದುಕೊಳ್ಳಬೇಕು ಮತ್ತು ಅದನ್ನು ಅನುಸರಿಸಲು ಬೇಕಾದ ಕಾರ್ಯತಂತ್ರವನ್ನು ಹೊಂದಿರುವುದರಿಂದ ಕೆಲವೇ ಕೆಲವು ನಿರ್ಧಾರಗಳನ್ನೂ ಕೂಡ ಗಟ್ಟಿಯಾಗಿ ಕೈಗೊಳ್ಳಲು ಸಹಾಯವಾಗುತ್ತದೆ. ನೀವು ಹೆಚ್ಚು ಹೆಚ್ಚು ಕಾರ್ಯಗಳಲ್ಲಿ ಮುನ್ನುಗ್ಗುವುದರಿಂದ ನಷ್ಟಕ್ಕೆ ಗುರಿಯಾಗುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಬುದ್ಧಿವಂತ ಹೂಡಿಕೆದಾರರು ಸಾಕಷ್ಟು ಸಂಶೋಧನೆಯ ಬಳಿಕ ಮತ್ತು ಆ ನಂಬಿಕೆಗೆ ಅಂಟಿಕೊಳ್ಳುವ ಮೂಲಕ ಕೆಲವೇ ಕೆಲವು ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಇಂತಹ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಬಹುತೇಕ ಹೂಡಿಕೆದಾರರು ವಿಫಲರಾಗುತ್ತಾರೆ.

## ತಾಳ್ಮೆ ಇರಲಿ

"ಷೇರು ಮಾರುಕಟ್ಟೆಯು ಹಣವನ್ನು ಅಸಹನೆಯಿಂದ ಸಹನೆಯತ್ತ ಪರಿವರ್ತಿಸುವ ಸಾಧನ" –ವಾರೆನ್ ಬಫೆಟ್.

ನಿಮ್ಮ ತಳೆದಿರುವ ನಂಬಿಕೆಯ ಬಗ್ಗೆ ಯಾವತ್ತೂ ತಾಳ್ಮೆಯನ್ನು ಕಾಯ್ದುಕೊಳ್ಳಬೇಕು. ಆ ಸಾಮರ್ಥ್ಯಕ್ಕೆ ಸರಿಸಾಟಿಯಾದ ಸಂಗತಿ ಬೇರೆ ಯಾವುದೂ ಇಲ್ಲ. ಮುಂಬರುವ ದಿನಗಳಲ್ಲಿ ನಿಮ್ಮ ತಾಳ್ಮೆಯೇ ನಿಮಗೆ ವರವಾಗಿ ಪರಿಣಮಿಸಲಿದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ನಿಮ್ಮ ಗೆಲುವಿನ ಓಟ ಚಾಲ್ತಿಯಲ್ಲಿದ್ದಾಗ ಮತ್ತು ಅವುಗಳನ್ನು ಸಾಧ್ಯವಾದಷ್ಟು ಬೇಗ ಮಾರಾಟ ಮಾಡದೇ ಕಾಯ್ದಿಟ್ಟುಕೊಳ್ಳುವುದು ಸುಲಭದ ಮಾತೇನೂ ಅಲ್ಲ. ಅದನ್ನೇ ನಾವು ಸಂಪತ್ತನ್ನು ಬೆಳೆಸುವ ಅತ್ಯಂತ ಯಶಸ್ವೀ ಕಾರ್ಯತಂತ್ರ ಎನ್ನುತ್ತೇವೆ. ಇಂತಹ ಹಾದಿಯನ್ನು ಸಾಮಾನ್ಯವಾಗಿ ಯಾರೂ ತುಳಿಯುವುದಿಲ್ಲ ಮತ್ತು ಈ ಹಾದಿಯಲ್ಲಿ ಯಾವತ್ತೂ ಜನದಟ್ಟಣೆ ಕಡಿಮೆ.



## ಭಾವನೆಗಳನ್ನು ನಿಭಾಯಿಸಿ

"ಯಾರಿಗೆ ತಮ್ಮ ಭಾವನೆಗಳನ್ನು ನಿಭಾಯಿಸಲು ಸಾಮರ್ಥ್ಯವಿರುವುದಿಲ್ಲವೋ ಅವರು ಹೂಡಿಕೆ ಪ್ರಕ್ರಿಯೆಯಿಂದ ಲಾಭ ಗಳಿಸುವ ಅರ್ಹತೆಯನ್ನು ಹೊಂದಿರುವುದಿಲ್ಲ" –ಬೆಂಜಮಿನ್ ಗ್ರಹಾಂ.

ಒಬ್ಬ ಹೂಡಿಕೆದಾರ ತನ್ನ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗದೇ ಇದ್ದರೆ ಆತ/ಆಕೆ ಹಣವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಹಣಕಾಸು ನಿರ್ಧಾರಗಳು ಮಾತ್ರವಲ್ಲ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾವನೆಗಳನ್ನು ತಳಕು ಹಾಕಿದರೆ ಅದರ ಪರಿಣಾಮವನ್ನು ಎದುರಿಸುವುದು ಅನಿವಾರ್ಯವಾಗುತ್ತದೆ. ನಿಜವಾದ ಶಕ್ತಿ ಇರುವುದು ಪ್ರಶಾಂತವಾಗಿ ಕುಳಿತು ಪ್ರತಿಯೊಂದನ್ನೂ ತಾರ್ಕಿಕವಾಗಿ ಗಮನಿಸುವುದು/ಅರ್ಥ ಮಾಡಿಕೊಳ್ಳುವುದರಲ್ಲಿ. ನಿಜವಾದ ಶಕ್ತಿ ತಾಳ್ಮೆ ಮತ್ತು ಸ್ವಯಂ–ಶಿಸ್ತಿನಲ್ಲಿದೆ. ಭಯ, ದುರಾಸೆ, ಆಶಯ, ಅಸಮ್ಮತಿ, ಅಹಂ ಇಂತಹ ಅನೇಕ ಭಾವನೆಗಳು ನಮ್ಮ ಹೂಡಿಕೆಯ ನಿರ್ಧಾರಗಳ ಮೇಲೆ ಆವರಿಸಿಕೊಳ್ಳಬಹುದು. ಹಾಗಾಗಿ ಭಾವನೆಗಳಿಂದ ಯಾವತ್ತೂ ದೂರ ಇರುವುದು ಶ್ರೇಯಸ್ಕರ.





# ಮುರಿದ ಸೇತುವೆಯ ಕಟ್ಟಿ ಮಹಿಳಾ ಶಕ್ತಿಗೆ ವಿತ್ತ ಶಕ್ತಿ

ಇದನ್ನು ನಿಮ್ಮ ಮನಸ್ಸಿನ ಪಟಲದಲ್ಲಿ ಚಿತ್ರಿಸಿಕೊಳ್ಳಿ, ಈ ಬಾರಿಯ ಒಲಂಪಿಕ್ಸ್‌ನಲ್ಲಿ ಭಾರತದ ಎಂಟು ಪದಕಗಳನ್ನು ಪಡೆದವರಲ್ಲಿ ಆರು ಮಂದಿ ಮಹಿಳೆಯರು! ಒಲಂಪಿಕ್ಸ್‌ನಲ್ಲಿ ಮಹಿಳೆಯರು ಈ ಪದಕಗಳನ್ನು ಗೆಲ್ಲುವ ಮೂಲಕ ನಮ್ಮ ದೇಶದ ಮತ್ತು ನಮ್ಮೆಲ್ಲರ ಗೌರವವನ್ನು ಎತ್ತರಕ್ಕೆ ಏರಿಸಿದ್ದಾರೆ. ಇಲ್ಲಿ ಇನ್ನಷ್ಟು ಚೇತೋಹಾರಿಯಾದ ಮತ್ತು ಸ್ಫೂರ್ತಿದಾಯಕ ಅಂಶ ಏನೆಂದರೆ ಈ ಮಹಿಳೆಯರೆಲ್ಲರೂ ಇಂದಿನ ಸಾಧನೆಗೆ ಮೆಟ್ಟಿಲುಗಳನ್ನಾಗಿ ಮಾಡಿಕೊಂಡಿರುವುದು ಅವರು ತಮ್ಮ ಜೀವನದ ಹಾದಿಯಲ್ಲಿ ಎದುರಿಸಿದ ಸಂಕಷ್ಟಗಳು ಮತ್ತು ಸವಾಲುಗಳನ್ನು.


ಸಾಮಾನ್ಯವಾಗಿ ಸರಾಸರಿ ಭಾರತೀಯರ ಮನೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಭಾರತದಾದ್ಯಂತ ಇರುವ ಸಣ್ಣ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ ಇರುವ ಪರಿಸ್ಥಿತಿಯ ಕಡೆಗೆ ದೃಷ್ಟಿ ಹೊರಳಿಸೋಣ. ಮಹಿಳೆಯರ ಹಣಕಾಸು ಮತ್ತು ಸಾಮಾಜಿಕ ಸ್ಥಾನಮಾನವನ್ನು ಸಾಮಾನ್ಯವಾಗಿ ಪುರುಷರ ನಂತರ ಸ್ಥಾನದಲ್ಲಿ ಪರಿಗಣಿಸಲಾಗುತ್ತದೆ. ನಾವು ನಮ್ಮ ತಾಯಿ, ಸಹೋದರಿಯರು, ಪುತ್ರಿಯರನ್ನು ಮತ್ತು ನಮ್ಮ ಪತ್ನಿಯನ್ನು ಪ್ರೀತಿ ಮಾಡಬಹುದು. ಆದರೆ ಹಣ ಅಥವಾ ಸಂಪತ್ತಿನ ವಿಚಾರ ಬಂದಾಗ ಇದೇ ನಂಬಿಕೆ ಇರುವುದಿಲ್ಲ. ನಾವು ಪದಕಗಳ ವಿಜೇತರಿಗೆ ಜೈಕಾರ ಹಾಕಬಹುದು, ಆದರೆ ಮನೆಯಲ್ಲಿ ಹಣಕಾಸು ವಿಚಾರದಲ್ಲಿ ಕೈಗೊಳ್ಳುವ ಸಣ್ಣ ನಿರ್ಧಾರಗಳಲ್ಲೂ ಅವರ ಮೇಲೆ ನಂಬಿಕೆ ಇಡುವುದಿಲ್ಲ. ನಮ್ಮ ಸಂಸ್ಕೃತಿ, ಸಂಪ್ರದಾಯವೇ ಹಾಗೆ, ಎಲ್ಲ ಹಣಕಾಸು ನಿರ್ಧಾರಗಳನ್ನು ಮನೆಯ 'ಯಜಮಾನ'ನೇ ಕೈಗೊಳ್ಳಬೇಕು ಅಥವಾ ಅನುಮೋದನೆ ನೀಡಬೇಕು. ಪ್ರಾಮಾಣಿಕ ಮಾತುಗಳಲ್ಲಿ ಹೇಳಬೇಕೆಂದರೆ, ಪುರುಷರು ಕೈಗೊಂಡ ಯಾವುದೇ ಹಣಕಾಸು ನಿರ್ಧಾರಗಳು ತಪ್ಪಿರಲಿ ಅಥವಾ ಸರಿಯಿರಲಿ ಅದರ ವಿಶ್ವಾಸಾರ್ಹತೆಯನ್ನು ಪರಿಶೀಲಿಸುವ ಕ್ರಮವಿಲ್ಲ.

ಆದರೆ, ಕ್ರಮೇಣ ಮತ್ತು ಅಷ್ಟೇ ಸ್ಥಿರವಾಗಿ ಹಣಕಾಸು ಜಗತ್ತಿನಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚುತ್ತಿದೆ. ಬ್ಯಾಂಕ್ ಖಾತೆಗಳನ್ನು ತೆರೆಯುವ ವಿಚಾರದಿಂದ ಆರಂಭಿಸಿ, ಪ್ಯಾನ್ ಕಾರ್ಡ್‌ಗಳನ್ನು ಪಡೆಯುವುದು, ಆದಾಯ ಸಲ್ಲಿಕೆಯನ್ನು ಮಾಡುವುದರ ತನಕ ಈಗ ಮಹಿಳೆಯರು ಸಕ್ರಿಯವಾಗಿ ಭಾಗಿಯಾಗುತ್ತಿದ್ದಾರೆ. ಆದರೆ ಹಣಕಾಸು ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ಹಣಕಾಸು ಸ್ವಾತಂತ್ರ್ಯ ದೂರದ ಮಾತಾಗಿಯೇ ಉಳಿದಿದೆ. ಅವರು ಕೈಗೊಳ್ಳುವ ಹೊಸ ಐಡಿಯಾಗಳನ್ನು ಮತ್ತು ವ್ಯಾಪಾರದ ಸಾಹಸಗಳನ್ನು ನಾವು ಅಷ್ಟು ಸುಲಭವಾಗಿ ನಂಬುವುದಿಲ್ಲ, ಒಪ್ಪಿಕೊಳ್ಳುವುದೂ ಇಲ್ಲ. ಒಂದು ಸಣ್ಣ ಸಾಲಕ್ಕೂ ಬ್ಯಾಂಕುಗಳು ಮತ್ತೊಮ್ಮೆ ಮರುಪರಿಶೀಲನೆ ಮಾಡುತ್ತವೆ ಮತ್ತು ಪತಿಯ KYCಯನ್ನು ಕೇಳುತ್ತವೆ. ಹಾಗಂತ ಇದೇ ಕ್ರಮವನ್ನು ಪುರುಷರ ವಿಷಯದಲ್ಲಿ ಮಾಡುವುದಿಲ್ಲ. ಒಂದು ವರದಿಯ ಪ್ರಕಾರ ಶೇ.47ರಷ್ಟು ಮಹಿಳೆಯರ ಬಳಿ ತಮ್ಮದೇ ವೈಯಕ್ತಿಕ ಬಳಕೆಗೆ ಬ್ಯಾಂಕ್ ಅಥವಾ ಉಳಿತಾಯ ಖಾತೆಗಳೇ ಇಲ್ಲ. ನಮ್ಮ ಬಳಿ ಹಣಕಾಸು ಸಹಭಾಗಿತ್ವದ, ಒಳಗೊಳ್ಳುವಿಕೆಯ ಅನೇಕ ಪದವಿಗಳಿರಬಹುದು, ಆದರೆ ನಿಜದ ಸಬಲೀಕರಣ ಎನ್ನುವುದು ಮರೀಚಿಕೆಯೇ ಆಗಿದೆ.

### ಆಕೆಗೆ ಯಾಕೆ ಹಣಕಾಸು ಅಧಿಕಾರ?

ಹೌದು, ಯಾಕೆ ಮಹಿಳೆಗೆ ಹಣಕಾಸಿನ ಅಧಿಕಾರವನ್ನು ನೀಡಬಾರದು? ಇದು ನಿಜವಾಗಿ ಕೇಳಬೇಕಾದ ಪ್ರಶ್ನೆ. ಪ್ರತಿಯೊಬ್ಬರಿಗೂ ಸಮಾನವಾದ ಅವಕಾಶಗಳ ಹಂಚಿಕೆ ಇರಬೇಕು ಮತ್ತು ಸಮಾನವಾದ ನಂಬಿಕೆ ಇಡಬೇಕು. ಅದು ಯಾವುದೇ ಒಂದು ಪ್ರಗತಿಪರ ಮತ್ತು ಅಭಿವೃದ್ಧಿಶೀಲ ಸಮಾಜಕ್ಕೆ ಮೂಲಾಧಾರವಾಗಿದೆ. ಒಂದು ವಿಶಾಲ ದೃಷ್ಟಿಕೋನದಲ್ಲಿ ಹೇಳಬೇಕೆಂದರೆ ಒಂದು ಕಾರ್ಮಿಕ ಶಕ್ತಿಯಾಗಿ, ಉಳಿತಾಯಗಾರರಾಗಿ ಮತ್ತು ಹೂಡಿಕೆದಾರರಾಗಿ ಮಹಿಳೆಯರ ಸಾಮರ್ಥ್ಯಕ್ಕೆ ಮುಕ್ತವಾದ ಅವಕಾಶವನ್ನು ನೀಡುವುದರಿಂದ ಭಾರತದ ವಿತ್ತೀಯ ವ್ಯವಸ್ಥೆ ಮತ್ತಷ್ಟು ವೃದ್ಧಿಯಾಗಲಿದೆ. ಒಂದು ಅಧ್ಯಯನದ ಪ್ರಕಾರ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರಿಗೆ ಸಮಾನವಾದ ಹಣಕಾಸು ಮತ್ತು ಅವಕಾಶಗಳು ದೊರೆತರೆ ಜಿಡಿಪಿ ಶೇ.26ಕ್ಕೆ ನೆಗೆಯಲಿದೆ. ಈಗಲೂ ಶೇ.51ರಷ್ಟು ಮಹಿಳೆಯರು ಮಾಡುವ ಕೆಲಸಕ್ಕೆ ಸಂಬಳವೇ ಇಲ್ಲ. ದುರಾದೃಷ್ಟದ ಸಂಗತಿ ಎಂದರೆ ವಿವಾಹ, ಮಗುವಿನ ಲಾಲನೆ–ಪಾಲನೆ, ಸಾಮಾಜಿಕ ಬದ್ಧತೆಗಳು, ಗೃಹಕೃತ್ಯದ ಕರ್ತವ್ಯಗಳು, ಆಹಾರದ ವಿಷಯಗಳು ಇನ್ನೂ ಅನೇಕ ಕಾರಣಗಳಿಂದಾಗಿ ಮಹಿಳೆಯರ ಕೆಲಸ–ಜೀವನ ಪುರುಷರಿಗಿಂತ ಕೆಳಮಟ್ಟದಲ್ಲಿಯೇ ಇದೆ. ಸಾಮಾನ್ಯವಾಗಿ ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ವೇತನ. ಇವೆಲ್ಲ ಕಾರಣಗಳಿಂದ ಬದುಕು ಅವರಿಗೆ ಸವಾಲಾಗಿ ಪರಿಣಮಿಸಿದೆ.

**ಹಣಕಾಸಿನ ವಿಚಾರ ಬಂದಾಗ ನಾವು ಮಹಿಳೆಯರ ಸಾಮರ್ಥ್ಯವನ್ನು ಪರಿಗಣಿಸುವುದಿಲ್ಲ. ಆಕೆಗೆ ಅಂತಹ ಯಾವುದೇ ಸ್ವಾತಂತ್ರ್ಯವನ್ನು ನೀಡಲು ಹಿಂಜರಿಯುತ್ತೇವೆ. ತಾಯಿ, ಸಹೋದರಿ, ಪತ್ನಿ ಎಂದು ಆಕೆಯನ್ನು ನಾವು ಪ್ರೀತಿ ಮಾಡಬಹುದು. ಆದರೆ ಹಣಕಾಸು ವಿಷಯ ಬಂದ ಕೂಡಲೇ ನಮ್ಮ ದೃಷ್ಟಿಕೋನ ಬದಲಾಗುತ್ತದೆ. ಇಂತಹ ಚೌಕಟ್ಟಿನಿಂದ ನಾವು ಹೊರಬರಬೇಕಾಗಿದೆ. ಮಹಿಳೆಯರೂ ಕೂಡ ಹಣಕಾಸು ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ಹಿಂಜರಿಯುವುದನ್ನು ಬಿಟ್ಟುಬಿಡಬೇಕು. ಮುನ್ನುಗ್ಗುವ ಛಾತಿ ಬೆಳೆಸಿಕೊಳ್ಳಬೇಕು...**



ಈಗ ನಾವು ಇದರ ಸೂಕ್ಷ್ಮ ಚಿತ್ರವನ್ನು ನೋಡೋಣ. ಒಂದು ಅಧ್ಯಯನದ ಪ್ರಕಾರ ದುಡಿಯುವ ಮಹಿಳೆ ತನ್ನ ಗಳಿಕೆಯಲ್ಲಿ ಶೇಕಡ 90ರಷ್ಟು ಆದಾಯವನ್ನು ತನ್ನ ಕುಟುಂಬದ ಮೇಲೆ, ಆರೋಗ್ಯ ಸುಧಾರಣೆಗೆ ಮತ್ತು ಶಿಕ್ಷಣಕ್ಕಾಗಿ ವ್ಯಯ ಮಾಡುತ್ತಾಳೆ. ಪುರುಷ ದುಡಿಯಬಹುದು ಅಥವಾ ದುಡಿಯದೇ ಇರಬಹುದು, ಆದರೆ ಮಹಿಳೆ, ಆಕೆ ದುಡಿಯಲಿ ಅಥವಾ ದುಡಿಯದೇ ಇರಲಿ ಆಕೆ ಯಾವತ್ತೂ ಗೃಹಿಣಿ ಮನೆಯ ಆರೋಗ್ಯವನ್ನು ಕಾಪಾಡುವವಳು. ನಗರದ ಸಣ್ಣ ಕುಟುಂಬ ವ್ಯವಸ್ಥೆಯಲ್ಲಿ ಪತ್ನಿ/ಗೃಹ ನಿರ್ವಾಹಕಿಯ ಕಡೆಗೆ ಬೆಂಬಲಕ್ಕಾಗಿ, ಸಹಾಯಕ್ಕಾಗಿ ಕೈಯೊಡ್ಡಬಹುದು. ಅದು ಸಾಮಾಜಿಕ, ಭಾವನಾತ್ಮಕ ಅಥವಾ ಆರ್ಥಿಕ ವಿಚಾರಗಳು ಕೂಡ ಆಗಿರಬಹುದು.

ಒಂದು ವೇಳೆ ಕುಟುಂಬದ ಏಕೈಕ ದುಡಿಯುವ ವ್ಯಕ್ತಿಗೆ ಏನಾದರೂ ಸಂಭವಿಸಿದರೆ ಮಹಿಳೆಯು ಆ ಜವಾಬ್ದಾರಿಯ ಹೊರೆಯನ್ನು ಹೊರಬೇಕಾಗುತ್ತದೆ. ಪತಿಯೊಂದಿಗೆ ವಿಚ್ಛೇದನವಾದರೆ ಅಥವಾ ಸಾವು ಸಂಭವಿಸಿದರೆ ಅಥವಾ ಪತಿ ಅಂಗವಿಕಲನಾದರೆ ಎದುರಾಗುವ ಪರಿಸ್ಥಿತಿಗಳನ್ನು ಕಲ್ಪನೆ ಮಾಡಿಕೊಳ್ಳಿ. ಮಹಿಳೆಗೆ ಸಾಮಾನ್ಯವಾಗಿ ತನ್ನ ಕುಟುಂಬದ ಹಣಕಾಸಿನ ಬಗ್ಗೆ ಯಾವುದೇ ಸುಳಿವು ಕೂಡ ಇರುವುದಿಲ್ಲ. ತುರ್ತು ಸಂದರ್ಭದಲ್ಲಿ ಅವರು ದಿಕ್ಕೇ ತೋಚದಂತಾಗಿ ಬಿಡುತ್ತಾರೆ. ಪಿತ್ರಾರ್ಜಿತದಲ್ಲಿ ಮತ್ತು ವ್ಯಾಪಾರದ ಸ್ವತ್ತುಗಳಲ್ಲಿ ನ್ಯಾಯೋಚಿತವಾದ ಪಾಲನ್ನು ಪಡೆಯುವುದು ಕೂಡ ಮಹಿಳೆಯರಿಗೆ ಕಷ್ಟಸಾಧ್ಯ. ಅನೇಕಾನೇಕ ಕಾರಣಗಳಿಂದ ಮಹಿಳೆಯರು ಈಗಲೂ ದುರ್ಬಲರು ಹಾಗೂ ಹಣಕಾಸು ವಿಚಾರದಲ್ಲಿ ಯಾವತ್ತೂ ಪುರುಷರನ್ನು ಅವಲಂಬಿಸಬೇಕಾದ ಪ್ರಮೇಯ ಬಂದಿದೆ. ಅದು ನಿಜಕ್ಕೂ ಅಸಹನೀಯ ಸಂಗತಿಯಾಗಿದೆ. ಹಾಗಾಗಿ ಆಕೆಯ ಹಣಕಾಸು ಸಬಲೀಕರಣ ಈ ಕಾಲದ ಅಗತ್ಯ.





## ಹಾಗಾದರೆ ನಮ್ಮ ಮುನ್ನಡೆ ಹೇಗೆ?

ಹಣಕಾಸು ವಿಚಾರದಲ್ಲಿ ಅರಿವನ್ನು ಹೊಂದಿರುವ, ಸ್ವತಂತ್ರವಾಗಿರುವ ಮತ್ತು ಸಶಕ್ತರಾಗಿರುವ ಮಹಿಳೆಯರು ಕುಟುಂಬಗಳು, ಸಮುದಾಯಗಳು ಮತ್ತು ಸಮಾಜಕ್ಕೆ ಪರಿವರ್ತನೆಯ ಶಕ್ತಿಯಾಗಬಹುದು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಮಹಿಳೆಯರ ಮೇಲಿನ ಬದಲಾವಣೆಯ ಭಾರಕ್ಕೂ ಮತ್ತೆ ಪುರುಷರನ್ನು ಅವಲಂಬಿಸುವುದರ ಬದಲಾಗಿ ಅವರೇ ಮುನ್ನುಗ್ಗುವ ಛಾತಿಯನ್ನು ಬೆಳೆಸಿಕೊಳ್ಳಬೇಕು. ಆ ಮೂಲಕ ಹಣಕಾಸು ಸ್ವಾತಂತ್ರ್ಯದ ನ್ಯಾಯಯುತ ಪಾಲನ್ನು ಪಡೆದುಕೊಳ್ಳಬೇಕು. ಇದೆಲ್ಲರ ಜೊತೆಗೆ ಜವಾಬ್ದಾರಿಯುತ ಪುರುಷರಾಗಿ ಹಾಗೆ ಮಾಡುವಂತೆ ನಮ್ಮ ಮಹಿಳೆಯರಿಗೆ ಉತ್ತೇಜನವನ್ನು ನೀಡಬೇಕು.

## ತುಳಿಯಬಹುದಾದ ಹಾದಿಯ ಚಿತ್ರಣ

ಒಬ್ಬ ಮಹಿಳೆ/ಹುಡುಗಿಯಾಗಿ ಹಣಕಾಸು ವಿಚಾರದಲ್ಲಿ ಅರಿವನ್ನು ಮೂಡಿಸಿಕೊಳ್ಳುವ ಅಗತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ನೀವು ಗಳಿಕೆಯನ್ನು ಮಾಡುತ್ತಿದ್ದರೆ ಹಣಕಾಸು ವಿಚಾರದಲ್ಲಿ ಸ್ವತಂತ್ರವಾಗುವ ಮತ್ತು ಸಶಕ್ತರಾಗುವ ಆಕಾಂಕ್ಷೆಯನ್ನು ಬೆಳೆಸಿಕೊಳ್ಳಬೇಕು.

ನಿಮ್ಮ ತಂದೆ ಅಥವಾ ಮತ್ತು ನಿಮ್ಮ ಸಂಗಾತಿಯ ಜೊತೆಗೆ ಸಮಾಲೋಚನೆಯನ್ನು ನಡೆಸಿ ಮತ್ತು ನಿಮ್ಮ ಆಸೆ/ ಆಕಾಂಕ್ಷೆಯನ್ನು ಹಂಚಿಕೊಳ್ಳಿ.

ಹಣಕಾಸು ವಿಷಯಗಳಲ್ಲಿ ನಿಮ್ಮ ಜ್ಞಾನವನ್ನು ಮತ್ತು ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಆರಂಭ ಮಾಡಿ. ಇದನ್ನು ಸುಲಭವಾಗಿ ಮಾಡಬಹುದಾಗಿದ್ದು, ಇದಕ್ಕೆ ಸಂಪನ್ಮೂಲದ ಯಾವುದೇ ಕೊರತೆ ಇಲ್ಲ.

ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ಬಾಧಿಸಬಹುದಾದ ಮಹತ್ವದ ಹಣಕಾಸು ನಿರ್ಧಾರಗಳನ್ನು ಪ್ರಶ್ನಿಸುವ, ಅರ್ಥ ಮಾಡಿಕೊಳ್ಳುವ ಮತ್ತು ಭಾಗಿಯಾಗುವ ಕೆಲಸವನ್ನು ಆರಂಭಿಸಿ.

ಬ್ಯಾಂಕ್/ವಿಮೆ/ಹೂಡಿಕೆ/ಆಸ್ತಿ ಇತ್ಯಾದಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ಕಾಯ್ದಿಟ್ಟುಕೊಳ್ಳುವ ಮತ್ತು ಯಾವುದೇ ತುರ್ತು ಸಂದರ್ಭಗಳಲ್ಲಿ ಸಿದ್ಧತೆ ಮಾಡಿಕೊಳ್ಳಲು ಕುಟುಂಬದ ಪ್ರಮುಖ ಸಲಹೆಗಾರರ ವಿವರಗಳನ್ನು ಇರಿಸಿಕೊಳ್ಳಿ.

ನಿಮ್ಮದೇ ಬ್ಯಾಂಕ್ ಉಳಿತಾಯ ಮತ್ತು ಹೂಡಿಕೆ ಖಾತೆಗಳನ್ನು ತೆರೆಯಿರಿ. ಸ್ವತಂತ್ರವಾಗಿ ಉಳಿತಾಯ ಮಾಡುವ ಕೆಲಸವನ್ನು ಆರಂಭಿಸಿ ಮತ್ತು ನಿಮ್ಮ ಹಣಕಾಸು ಉತ್ಪನ್ನಗಳ ವಿತರಕರು/ಸಲಹೆಗಾರರಿಂದ ಕಲಿತುಕೊಳ್ಳಿ.

ನಿಮ್ಮದೇ ಹಣದ ಮಾಲಕತ್ವವನ್ನು ವಹಿಸಿಕೊಳ್ಳುವುದನ್ನು ಮತ್ತು ನಿಮ್ಮ ಕನಸಿಗೆ ತಕ್ಕಂತೆ ಅದನ್ನು ನಿಭಾಯಿಸಲು ಆರಂಭಿಸಿ. ನಿಮ್ಮದೇ ತುರ್ತು ನಿಧಿಗಾಗಿ ಮತ್ತು ನಿಮ್ಮದೇ ಹಣಕಾಸು ಗುರಿಗಳಿಗಾಗಿ ಹೂಡಿಕೆ ಮಾಡುವುದನ್ನು ಆರಂಭಿಸಿ. ಮಹಿಳೆಯರು ಮನೆಯಲ್ಲಿ ಉಳಿತಾಯ ಮಾಡುವುದರಲ್ಲಿ ಮತ್ತು ಹಣದ ನಿರ್ವಹಣೆ ಮಾಡುವುದರಲ್ಲಿ ಚತುರರು ಎಂಬುದಕ್ಕೆ ಹೆಸರಾದವರು. ಅವರು ಈಗ ಮುಂದಿನ ಹೆಜ್ಜೆಯನ್ನು ಇಡಲು ಸಕಾಲ. ಹಣಕಾಸು ವಿಚಾರದಲ್ಲಿ ಸ್ವತಂತ್ರ ವಾಗುವುದರಿಂದ ಒಬ್ಬನ ವ್ಯಕ್ತಿತ್ವಕ್ಕೆ ಮಾನ್ಯತೆ ಸಿಗುತ್ತದೆ, ಆತ್ಮವಿಶ್ವಾಸ ವೃದ್ಧಿಸುತ್ತದೆ ಮತ್ತು ಕುಟುಂಬದಲ್ಲಿ ಮಾತಿಗೆ ಕಿಮ್ಮತ್ತು ಹಾಗೂ ಗೌರವ ದೊರೆಯುತ್ತದೆ. ಜೊತೆಯಾಗಿ ಕೆಲಸ ಮಾಡೋಣ, ಅದು ಕೇವಲ ಹಣಕಾಸು ಸಬಲೀಕರಣಕ್ಕಾಗಿ ನಮ್ಮ ಮನೆಯ ಮಹಿಳೆಯನ್ನು ಬೆಂಬಲಿಸುವುದು ಮಾತ್ರವಲ್ಲ, ಜೀವನದಲ್ಲಿ ಆಕೆಯದೇ ಆದ ಕನಸುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ. ಮೊದಲು ನಮ್ಮದೇ ಮನೆಯಲ್ಲಿ ಬದಲಾವಣೆಗೆ ಮುನ್ನುಡಿ ಬರೆಯೋಣ.

### ವಾಹನ ವಿಮೆ: ಮರೆಯಬಾರದ ಸಂಗತಿಗಳು

# ಓಡುವ ವಾಹನಕೆ ಸುರಕ್ಷತಾ ಕವಚ

**ನಾವು ನಮ್ಮ ಜೀವವನ್ನು ಹೇಗೆ ರಕ್ಷಿಸಿಕೊಳ್ಳುತ್ತೇವೋ ಅದೇ ರೀತಿ ನಮ್ಮ ವಾಹನವೂ ಕೂಡ. ನಮ್ಮ ದೇಹದ ಆರೋಗ್ಯ ಹದಗೆಟ್ಟಂತೆ ನಮ್ಮ ವಾಹನದ ಆರೋಗ್ಯವೂ ಕೈಕೊಡಬಹುದು. ನಮ್ಮ ಎಲ್ಲ ಓಡಾಟಕ್ಕೆ, ಅದರಿಂದ ಸಿಗುವ ಖುಷಿಗೆ ಕಾರಣವಾಗಿರುವ ವಾಹನಕ್ಕೆ ಬೇಕಾದ ಭದ್ರತೆಯನ್ನು ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮ ತುರ್ತು ಅಗತ್ಯಗಳನ್ನು ನಿಭಾಯಿಸುವ ವಾಹನದ ರಕ್ಷಾ ಕವಚವೇ ಮೋಟಾರ್ ವೆಹಿಕಲ್ ಇನ್ಸೂರೆನ್ಸ್. ಅದರ ಸಾಧಕ–ಬಾಧಕಗಳ ಕಡೆಗೆ ಒಮ್ಮೆ ದೃಷ್ಟಿ ಹಾಯಿಸೋಣ ಬನ್ನಿ...**

ನಮ್ಮಲ್ಲಿ ಹೆಚ್ಚಿನವರಿಗೆ ಜೀವ ವಿಮೆ ಮತ್ತು ಆರೋಗ್ಯ ವಿಮಾ ರೂಪದ ಪಾಲಿಸಿಗಳು ಮತ್ತು ಅವುಗಳಲ್ಲಿರುವ ಷರತ್ತುಗಳು ಮತ್ತು ಸವಲತ್ತುಗಳ ಬಗ್ಗೆ ಪರಿಚಯವಿದೆ. ಇತರ ಯಾವುದೇ ಪಾಲಿಸಿಯಂತೆ ವಾಹನ ವಿಮಾ ಪಾಲಿಸಿ ಕೂಡ ನಮಗೆ ಹಣಕಾಸು ರಕ್ಷಣೆಯನ್ನು ನೀಡುವ ಸಾಧನವಾಗಿದೆ. ನಮ್ಮ ಜೀವನಕ್ಕೆ ಮತ್ತು ಆರೋಗ್ಯ ವಿಮೆಗೆ ಸಾಕಷ್ಟು ಸೌಲಭ್ಯಗಳ ಅಗತ್ಯವಿರುವಂತೆ ನಮ್ಮ ವಾಹನಗಳಿಗೂ ಕೂಡ ಸಾಕಷ್ಟು ಪ್ರಮಾಣದ ಸೌಲಭ್ಯಗಳ ಅಗತ್ಯವಿರುತ್ತದೆ. ಅದಕ್ಕೂ ಹಣಕಾಸಿನ, ಸುರಕ್ಷತೆಯ ಹೊದಿಕೆ ಬೇಕಾಗುತ್ತದೆ.

ವಾಹನ ವಿಮಾ ಪಾಲಿಸಿಯಲ್ಲಿನ ಸೌಲಭ್ಯವು ಅಪಘಾತಗಳು ಅಥವಾ ಇತರ ಯಾವುದೇ ರೀತಿಯ ಹಾನಿಗಳಿಂದ ಉಂಟಾಗುವ ಹಣಕಾಸು ನಷ್ಟಗಳಿಗೆ ಪ್ರತಿಯಾಗಿ ವಾಹನ ಮಾಲೀಕರು ಮತ್ತು ಚಾಲಕರಿಗೆ ಭದ್ರತೆಯನ್ನು ಒದಗಿಸುತ್ತದೆ. ಒಂದು ಅಪಘಾತ ಸಂಭವಿಸಿದ ಬಳಿಕ ಉಂಟಾಗುವ ಭಾರೀ ಪ್ರಮಾಣದ ವೆಚ್ಚಗಳನ್ನು ತಡೆಯುವ ಅತ್ಯುತ್ತಮ ಭದ್ರತೆ ಎಂದರೆ ವಾಹನ ವಿಮಾ ಪಾಲಿಸಿ.



ಒಂದು ವಾಹನ ವಿಮಾ ಗುತ್ತಿಗೆಯಲ್ಲಿ ಮೊದಲ ಪಾರ್ಟಿ ಎಂದರೆ ವಿಮಾದಾರರು/ ಪಾಲಿಸಿಯನ್ನು ಹೊಂದಿದವರು, ಎರಡನೇ ಪಾರ್ಟಿ ಎಂದರೆ ವಿಮಾ ಸಂಸ್ಥೆ ಮತ್ತು ಮೂರನೇ ಪಾರ್ಟಿ ಎಂದರೆ ಮೊದಲನೇ ಪಾರ್ಟಿಯ ವಾಹನದಿಂದ ಉಂಟಾಗಿರುವ ಅಪಘಾತದಿಂದ ಹಾನಿಗೆ ಒಳಗಾಗಿ ರುವ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು.

ದುರಾದೃಷ್ಟದ ಸಂಗತಿ ಎಂದರೆ ಬಹುತೇಕ ಸಂದರ್ಭಗಳಲ್ಲಿ ನಾವು ಅತ್ಯಂತ ಅಗ್ಗದ, ಕನಿಷ್ಠ ಮೊತ್ತದ ವಾಹನ ವಿಮಾ ಪಾಲಿಸಿಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಇದು ಸಂಭಾವ್ಯ ಹಣಕಾಸು ಅಪಾಯಗಳಿಂದ ವಾಹನಗಳ ಮಾಲೀಕರಿಗೆ ಭದ್ರತೆಯನ್ನು ಒದಗಿಸುವ ಕಾನೂನಿನಿಂದ ಕೂಡಿದೆ. ಇವುಗಳಲ್ಲಿ ಹೆಚ್ಚಿನವು ನಮಗೆ ಲಭ್ಯವಿರುವ



ನಾನಾ ಷರತ್ತುಗಳು ಮತ್ತು ಸೌಲಭ್ಯಗಳನ್ನು ಒಳಗೊಳ್ಳದೇ ಇರಬಹುದು.

ನೀವು ಒಂದು ವಾಹನ ವಿಮಾ ಪಾಲಿಸಿಯನ್ನು ಖರೀದಿ ಮಾಡುವುದಕ್ಕೆ ಮುನ್ನ ಮತ್ತು ಅಥವಾ ಪಾಲಿಸಿಯನ್ನು ನವೀಕರಿಸುವುದಕ್ಕೆ ಮುನ್ನ ನಿಮಗೆ ಲಭ್ಯವಿರುವ ಆಯ್ಕೆಗಳು ಮತ್ತು ರಿಸ್ಕ್‌ಗಳ ಬಗ್ಗೆ ಪರಿಶೋಧನೆ ಮಾಡುವುದು ಮತ್ತು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ವಾಹನದ ಮಾಲೀಕರಾಗಿ ನಮ್ಮಲ್ಲಿ ಹೆಚ್ಚಿನವರು ವಾಹನ ಕಳ್ಳತನ, ಅಪಘಾತದ ಭಯ ಹಾಗೂ ನಮ್ಮ ವಾಹನಗಳು ಓಡಾಡುವ ಭಾರತದ ರಸ್ತೆಗಳ ದುರವಸ್ಥೆಯನ್ನು ನಿಭಾಯಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಪರಿಪೂರ್ಣವಾದ ಸೌಲಭ್ಯಗಳನ್ನು ಒಳಗೊಂಡ ವಿಮಾ ಪಾಲಿಸಿಯು ನಮ್ಮ ಜವಾಬ್ದಾರಿಯನ್ನು ಮೀರಿದ್ದಾಗಿದೆ. ಇದು ನಮ್ಮ ಜೀವನದ ಅತ್ಯಗತ್ಯ ಕೂಡ.

ನಾವೀಗ ವಾಹನ ವಿಮೆಗಳಲ್ಲಿ ನಮಗೆ ಲಭ್ಯವಿರುವ ನಾನಾ ಸೌಲಭ್ಯಗಳು ಮತ್ತು ಷರತ್ತುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ.

## ವಾಹನ ವಿಮೆಗಳಲ್ಲಿನ ವಿಧಗಳು

**ಥರ್ಡ್ ಪಾರ್ಟಿ ಬಾಧ್ಯತಾ ವಿಮೆ:** ಇದು ವಾಹನ ವಿಮೆಯಲ್ಲಿ ಅತ್ಯಂತ ಪ್ರಾಥಮಿಕ ಮತ್ತು ಸಾಮಾನ್ಯ ವಿಧಾನದ್ದಾಗಿದ್ದು ಇದನ್ನು ಬಾಧ್ಯತೆ ಮಾತ್ರದ ವಿಮೆ ಎಂದು ಕರೆಯಲಾಗುತ್ತದೆ. ಎಲ್ಲ ವಾಹನ ಮಾಲೀಕರು ಥರ್ಡ್-ಪಾರ್ಟಿ ವಿಮೆ ಪಡೆದುಕೊಳ್ಳುವುದನ್ನು 1988ರ ಮೋಟಾರ್ ವಾಹನಗಳ ಕಾಯ್ದೆ ಕಡ್ಡಾಯಗೊಳಿಸಿದೆ. ಹಾಗಾಗಿ ಭಾರತದಲ್ಲಿ ಸೂಕ್ತವಾದ ವಾಹನ ವಿಮಾ ಪಾಲಿಸಿಯನ್ನು ಹೊಂದಿರದೇ ಚಾಲನೆ ಮಾಡುವುದು ಕಾನೂನು ಬಾಹಿರವಾಗಿರುತ್ತದೆ ಮತ್ತು ಇದು ದಂಡ ಮತ್ತು ಅಥವಾ ಜೈಲು ಶಿಕ್ಷೆಗೂ ದಾರಿ ಮಾಡಿಕೊಡಬಹುದು. ಥರ್ಡ್-ಪಾರ್ಟಿ ಮೋಟಾರ್ ವಿಮೆಯು ಪ್ರಾಥಮಿಕ ಪಾಲಿಸಿಯಾಗಿರುವ ಕಾರಣ ಇದು ಕೇವಲ ಮೂರನೇ ವ್ಯಕ್ತಿಗೆ (ಥರ್ಡ್-ಪಾರ್ಟಿ), ಆತನ ವಾಹನಕ್ಕೆ ಅಥವಾ ಸೊತ್ತಿಗೆ ಸಂಭವಿಸಿದ ಹಾನಿ ಮತ್ತು ನಷ್ಟಗಳನ್ನು ಮಾತ್ರ ಭರಿಸುತ್ತದೆ ಮತ್ತು ಉಳಿದ ಸೌಲಭ್ಯಗಳನ್ನು ಒದಗಿಸುವುದಿಲ್ಲ.

## ಸಮಗ್ರ ಮೋಟಾರ್ ವಿಮೆ

## (Comprehensive motor insurance)

ಇದರ ಹೆಸರೇ ಹೇಳುವಂತೆ ಸಮಗ್ರ ವಿಮಾ ಪಾಲಿಸಿಯು ವ್ಯಾಪಕವಾದ ಸೌಲಭ್ಯಗಳನ್ನು ಹೊಂದಿದ್ದು ಅಪಘಾತದಲ್ಲಿ ಶಾಮೀಲಾದ ಎರಡೂ ಕಡೆಯವರಿಗೆ ಸಂಪೂರ್ಣವಾದ ಭದ್ರತೆಯನ್ನು ಒದಗಿಸುತ್ತದೆ. ಹಾಗಾಗಿ, ತನಗಾಗಿರುವ, ಕಾರಿಗಾಗಿರುವ ಹಾನಿಯ ಜೊತೆಗೆ ಅಪಘಾತದಲ್ಲಿ ಶಾಮೀಲಾಗಿರುವ ಇತರ ವ್ಯಕ್ತಿಗೆ ಆಗಿರುವ ಹಾನಿಗಳು ಕೂಡ ಈ ಸಮಗ್ರ ಪಾಲಿಸಿಯಲ್ಲಿ ಒಳಗೊಂಡಿರುತ್ತವೆ ಮತ್ತು ಗರಿಷ್ಠ ಮೊತ್ತದ ಸೌಲಭ್ಯದ ವ್ಯಾಪ್ತಿಯನ್ನು ಹೊಂದಿದೆ. ಈ ಪಾಲಿಸಿಯಲ್ಲಿ ವ್ಯಕ್ತಿಗಳಿಗೆ ಸಂಭವಿಸುವ ಗಾಯ/ಸಾವಿಗೆ ಸಂಬಂಧಿಸಿದಂತೆ ಗರಿಷ್ಠ ಮೊತ್ತದ ಸೌಲಭ್ಯ ದೊರೆಯುತ್ತದೆ. ಆದರೆ ಮೂರನೇ ವ್ಯಕ್ತಿಯ ಆಸ್ತಿ ಹಾನಿಗೆ ನಿರ್ಬಂಧವಿರುತ್ತದೆ. ಈ ರೀತಿಯ ವಾಹನ ಪಾಲಿಸಿಯ ಪ್ಲಾನ್‌ನಲ್ಲಿ ವಿಮೆಗೆ ಒಳಪಟ್ಟ ವಾಹನಕ್ಕೆ ಗಲಭೆ, ಕಳ್ಳತನ, ಅಗ್ನಿ ಅವಘಡ, ಪ್ರವಾಹ, ನೈಸರ್ಗಿಕ ವಿಕೋಪ, ಹಕ್ಕಿಗಳು/ಪ್ರಾಣಿಗಳು/ ಮೇಲಿನಿಂದ ಬಿದ್ದ ವಸ್ತುಗಳಿಂದ ಉಂಟಾದ ಹಾನಿಯನ್ನು ಭರಿಸಿಕೊಡಲಾಗುತ್ತದೆ.

## ಮೋಟಾರ್ ವಿಮಾ ಷರತ್ತುಗಳು/ಹೆಚ್ಚುವರಿ ಪ್ಲಾನ್‌ಗಳು

ಪ್ರತಿಯೊಂದು ವಾಹನದ ಮಾಲೀಕನಿಗೂ ನಿರ್ದಿಷ್ಟವಾದ ಅಗತ್ಯಗಳು ಮತ್ತು ನಿರೀಕ್ಷೆಗಳು ಇರಬಹುದು. ಹಾಗಾಗಿ ಪ್ರಾಥಮಿಕ ಪಾಲಿಸಿಯು ಇವನ್ನೆಲ್ಲ ಒಳಗೊಳ್ಳಲು ಸಾಧ್ಯವಿರುವುದಿಲ್ಲ. ಅದೃಷ್ಟದ ಸಂಗತಿ ಏನೆಂದರೆ ವಾಹನ ಮಾಲೀಕರು ತಮ್ಮ ಅಗತ್ಯಗಳಿಗೆ ತಕ್ಕಂತೆ ಸೌಲಭ್ಯಗಳನ್ನು ಪಡೆದುಕೊಂಡು ನೆಮ್ಮದಿಯಿಂದ ಇರಬಹುದು. ಈ ಪಾಲಿಸಿಗಳಲ್ಲಿ ಇರುವ ಅತ್ಯಂತ ಸಾಮಾನ್ಯ ಎನ್ನುವ ಷರುತ್ತುಗಳು/ಹೆಚ್ಚುವರಿ ಸೌಲಭ್ಯಗಳು ಯಾವುದು ಎಂಬುದನ್ನು ನೋಡೋಣ:

**ಶೂನ್ಯ ಸವಕಳಿ ಸೌಲಭ್ಯ:** ಶೂನ್ಯ ಸವಕಳಿ ಎಂದು ಕರೆಯಲಾಗುವ ಈ ಸೌಲಭ್ಯದಿಂದ ಕ್ಲೈಮ್ ಮಾಡುವ ಸಂದರ್ಭದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಳಿತಾಯವನ್ನು ಮಾಡಬಹುದು. ಹೇಗೆ? ನೀವು ಕಾರನ್ನು ಖರೀದಿ ಮಾಡಿದ ಕೂಡಲೇ ಅದರ ಮೌಲ್ಯದಲ್ಲಿ ಸವಕಳಿ ಉಂಟಾಗುತ್ತದೆ. ನೀವು ಕ್ಲೈಮ್ ಮಾಡುವ ಸಂದರ್ಭದಲ್ಲಿ ಸವಕಳಿಗೆ ಸಂಬಂಧಿಸಿದ ವೆಚ್ಚಗಳನ್ನು ಸಾಮಾನ್ಯವಾಗಿ ಮರುಭರ್ತಿ ಮಾಡಿಕೊಡುವುದಿಲ್ಲ. ಈಗ ಒಂದು ವೇಳೆ ನಿಮಗೆ ಒಂದು ಲಕ್ಷ ರೂಪಾಯಿ ಹಾನಿ ಉಂಟಾಗಿದ್ದು, ಸವಕಳಿಯು 50,000 ರೂ. ಆಗಿದ್ದರೆ ಆಗ ನಿಮಗೆ 50,000 ರೂ. ಮರುಭರ್ತಿ ಮಾಡಲಾಗುತ್ತದೆಯೇ ಹೊರತು ನೀವು ಪಾವತಿ ಮಾಡಬೇಕಾಗಿರುವ ಒಂದು ಲಕ್ಷ ರೂಪಾಯಿಗೆ ಅಲ್ಲ. ಅಂತಹ ಸಂದರ್ಭದಲ್ಲಿ, ಈ ಶೂನ್ಯ ಸವಕಳಿ (zero depretiation facility) ವಿಮಾ ಸೌಲಭ್ಯವು ನಿಮ್ಮ ರಕ್ಷಣೆಗೆ





ಬರುತ್ತದೆ. ವಿಮಾದಾರರು ನಿಮ್ಮ ವಾಹನ ಮತ್ತು ಅದರ ಭಾಗಗಳ ಸವಕಳಿಗೆ ಸಂಬಂಧಿಸಿದ ವೆಚ್ಚಗಳನ್ನು ಭರಿಸಲಿದ್ದಾರೆ. **ಕ್ಲೈಮ್ ರಹಿತ ಬೋನಸ್ (ಎನ್‌ಸಿಬಿ) ಭದ್ರತಾ ಸೌಲಭ್ಯ:** ಕ್ಲೈಮ್ ರಹಿತ ಬೋನಸ್ ಎಂದರೆ ನೀವು ನಿಮ್ಮ ಪಾಲಿಸಿಯ ಅವಧಿಯಲ್ಲಿ ಯಾವುದೇ ಕ್ಲೈಮ್‌ನ್ನು ಮಾಡದೇ ಇರುವುದಕ್ಕಾಗಿ ಪಾಲಿಸಿದಾರರು ನಿಮಗೆ ನೀಡುವ ಬಹುಮಾನ. ನೀವು ನಿಮ್ಮ ಪಾಲಿಸಿಯನ್ನು ನವೀಕರಣ ಮಾಡುವ ಸಂದರ್ಭದಲ್ಲಿ ಈ ರಿಯಾಯ್ತಿಯನ್ನು ನೀಡಲಾಗುತ್ತದೆ. ನವೀಕರಣದ ಪ್ರೀಮಿಯಂನಲ್ಲಿ ಶೇ.20ರಿಂದ 50ರ ತನಕ ರಿಯಾಯ್ತಿ ದೊರೆಯುತ್ತದೆ. ಆದರೆ ನೀವು ನಿಮ್ಮ ಪಾಲಿಸಿಯ ಅವಧಿಯಲ್ಲಿ ಯಾವುದಾದರೂ ಕ್ಲೈಮ್‌ಗಳನ್ನು ಮಾಡಿದ್ದರೆ ಈ ಸೌಲಭ್ಯದ ಅರ್ಹತೆಯನ್ನು ಕಳೆದುಕೊಳ್ಳುತ್ತೀರಿ. ಆದರೆ ಕ್ಲೈಮ್ ರಹಿತ ಬೋನಸ್ ಭದ್ರತಾ ಸೌಲಭ್ಯದಿಂದ ನೀವು ಪಾಲಿಸಿಯ ಅವಧಿಯಲ್ಲಿ ಕ್ಲೈಮ್ ಮಾಡಿದ್ದರೂ ಕೂಡ ಈ ಬೋನಸ್ ಸೌಲಭ್ಯವನ್ನು ಕಾಯ್ದಿಟ್ಟುಕೊಳ್ಳಬಹುದು.

**ಯಂತ್ರ ಭದ್ರತಾ ಸೌಲಭ್ಯ:** ಒಂದು ಸ್ವತಂತ್ರ ಸಮಗ್ರ ಪಾಲಿಸಿಯಲ್ಲಿ ಎಂಜಿನ್ ಸಂಬಂಧದ ಹಾನಿಗಳ ದುರಸ್ತಿ ವೆಚ್ಚವನ್ನು ಭರಿಸಲಾಗುವುದಿಲ್ಲ. ಆದರೆ ವಿಮಾ ಪಾಲಿಸಿಯಲ್ಲಿ ಎಂಜಿನ್ ಸುರಕ್ಷತಾ ಸೌಲಭ್ಯವನ್ನು ಖರೀದಿ ಮಾಡುವುದರಿಂದ ನಿಮ್ಮ ಕಾರಿನ ಎಂಜಿನ್ ಸುರಕ್ಷತೆಯ ವೆಚ್ಚವನ್ನು ಕೂಡ ಒಳಗೊಳ್ಳುವಂತೆ ಮಾಡಬಹುದು. ಈ ಹೆಚ್ಚುವರಿ ಸೌಲಭ್ಯವು ಜಲಾವೃತವಾಗುವ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅನುಕೂಲವಾಗಲಿದೆ.

ಕಾರು ಕಳ್ಳತನವು ಪ್ರಮುಖ ಸಮಸ್ಯೆಯಾಗಿದ್ದು ರಾಷ್ಟ್ರದ ಅನೇಕ ಭಾಗಗಳಲ್ಲಿ ಜನ ಇದನ್ನು ಎದುರಿಸುತ್ತಿದ್ದಾರೆ. ಒಂದು ವೇಳೆ ಕಾರು ಕಳ್ಳತನವಾದರೆ ಸಮಗ್ರ ವಿಮಾ ಸೌಲಭ್ಯವು ಕಾರಿನ ಮೌಲ್ಯವನ್ನು ಮರುಭರ್ತಿ ಮಾಡುತ್ತದೆ. ಆದರೆ ಅದು ಒಟ್ಟು ನಷ್ಟದ ವೆಚ್ಚವನ್ನು ಒಳಗೊಂಡಿಲ್ಲದೇ ಇರಬಹುದು. ರಿಟರ್ನ್ ಟು ಇನ್‌ವೈಸ್ (ಆರ್‌ಟಿಐ) ಸೌಲಭ್ಯವು ಸವಕಳಿಗೆ ಸಂಬಂಧಿಸಿದ್ದಾಗಿರುವುದಿಲ್ಲ ಹಾಗಾಗಿ ಇದು ನಿಮ್ಮ ವಾಹನದ ನಿಜವಾದ ಇನ್‌ವೈಸ್ ಮೌಲ್ಯವನ್ನು ಭರಿಸುತ್ತದೆ ಎಂಬುದನ್ನು ಗಮನಿಸಬೇಕು.

**ಪ್ರಯಾಣಿಕರಿಗೆ ವೈಯಕ್ತಿಕ ಅಪಘಾತ ಸೌಲಭ್ಯ:** ಸಮಗ್ರ ವಿಮಾ ಪಾಲಿಸಿಯು ವಾಹನದ ಮಾಲೀಕರಿಗೆ ಮತ್ತು ಚಾಲಕರಿಗೆ ಸೌಲಭ್ಯವನ್ನು ಒದಗಿಸುತ್ತದಾದರೂ ಪ್ರಯಾಣಿಕರಿಗೆ ಸುರಕ್ಷತೆಯನ್ನು ನೀಡುವುದಿಲ್ಲ. ಈ ಹೆಚ್ಚುವರಿ ಸೌಲಭ್ಯವು ಪ್ರಯಾಣಿಕರಿಗೂ ಕೂಡ ವೈಯಕ್ತಿಕ ಅಪಘಾತದಿಂದಾಗುವ ಹಾನಿಯನ್ನು ಕೂಡ ಭರಿಸುತ್ತದೆ.

**ರಸ್ತೆಬದಿ ಸಹಾಯ ಸೌಲಭ್ಯ:** ಕಾರಿನಲ್ಲಿ ಸಮಸ್ಯೆಗಳು ಉದ್ಭವಿಸಿ ಸಹಾಯದ ಅಗತ್ಯವಿದೆ ಎನಿಸಿದಾಗ 27X7 ರಸ್ತೆಬದಿ ಕಾರಿನ ಸಹಾಯದ ಸೌಲಭ್ಯವು ಆಪತ್ ರಕ್ಷಕವಾಗಿ ಕೆಲಸ ಮಾಡಬಹುದು. ಕಾರಿನ ಟಯರ್‌ಗಳು ತನ್ನ ಚಹರೆಯನ್ನು ಕಳೆದುಕೊಂಡಾಗ, ತುರ್ತಾಗಿ ಗಾಡಿಯನ್ನು ಟೋಯಿಂಗ್ ಮಾಡಬೇಕಾದ ಪ್ರಸಂಗ ಬಂದಾಗ, ವಾಹನದ ಚಾವಿ ಸೇವೆ, ಸ್ಥಳದಲ್ಲಿಯೇ ರಿಪೇರಿ ಮಾಡುವುದು, ಚಾಲಕನ ಅಸಾಮರ್ಥತೆ, ತುರ್ತಾಗಿ ಇಂಧನ ವಿತರಣೆ ಮಾಡಬೇಕಾದಾಗ, ಕ್ಯಾಬ್ ಸೇವೆ ಇತ್ಯಾದಿ ಸಂದರ್ಭದಲ್ಲಿ ಇದು ಸಹಾಯಕ್ಕೆ ಬರುತ್ತದೆ.

## ಉಪಭೋಗ್ಯದ ಸೌಲಭ್ಯ

ಒಂದು ವಾಹನದ ದೃಷ್ಟಿಕೋನದಲ್ಲಿ ಆಯಾ ವಾಹನದ ಬಿಡಿಭಾಗಗಳು, ಎಂಜಿನ್ ತೈಲ, ಸ್ಕ್ರೀನ್ ವಾಷರ್‌ಗಳು ಮತ್ತಿತರ ವಿಷಯಗಳನ್ನು ಉಪಭೋಗ್ಯಗಳು ಎಂದು ಪರಿಗಣಿಸಲಾಗುತ್ತದೆ. ಇವೆಲ್ಲವೂ ವಾಹನದ ಭಾಗವಾಗಿದ್ದರೂ ಕೂಡ ಈ ಭಾಗಗಳು ವಿಮಾ ಕಂಪನಿಯ ವ್ಯಾಪ್ತಿಯೊಳಗೆ ಬರುವುದಿಲ್ಲ. ಆದರೆ ಈ ಪಾಲಿಸಿಯಲ್ಲಿ ಅವುಗಳ ವೆಚ್ಚವನ್ನು ಭರಿಸಲಾಗುತ್ತದೆ.

## ಬಾಟಮ್ ಲೈನ್

ಕೋವಿಡ್ ಪ್ಯಾಂಡಮಿಕ್ ನಮ್ಮನ್ನು ವಿಶೇಷವಾಗಿ ಕಾಡಿ ಹೈರಾಣು ಮಾಡಿ ಹೋದ ಬಳಿಕ ಒಂದು ವಾಹನವನ್ನು ಖರೀದಿ ಮತ್ತು ನಿರ್ವಹಣೆ ಮಾಡುವುದು ಅತ್ಯಗತ್ಯವಾಗಿದೆ. ಆದರೆ, ವಾಹನಗಳನ್ನು ಹೊಂದುವುದೆಂದರೆ ಅದಕ್ಕೆ ಅದರದ್ದೇ ಆದ ವೆಚ್ಚಗಳಿರುತ್ತವೆ. ಯಾವುದೇ ಅನಿರೀಕ್ಷಿತ ಘಟನೆ ಸಂಭವಿಸಿದ ಪಕ್ಷದಲ್ಲಿ ಇದು ಹಣಕಾಸು ಹೊರೆಯಾಗಿ ಪರಿಣಮಿಸಿದ ಉದಾಹರಣೆ ಇಲ್ಲ. ಸೂಕ್ತವಾದ ಹೆಚ್ಚುವರಿ ಸೌಲಭ್ಯಗಳು ಮತ್ತು ಷರತ್ತುಗಳನ್ನು ಒಳಗೊಂಡ ಸಮಗ್ರ ವಿಮಾ ಪಾಲಿಸಿಯಿಂದ ನಿಮಗೆ ಬಹುದೊಡ್ಡ ನಷ್ಟವೇನೂ ಅಗುವುದಿಲ್ಲ, ನಿಮಗಾಗುವ ಹಾನಿ ಕನಿಷ್ಠವಾಗುತ್ತದೆ ಮತ್ತು ಹಣಕಾಸು ವಿಚಾರದಲ್ಲಿ ನಿಮಗೆ ರಕ್ಷಣೆ ಸಿಗುತ್ತದೆ. ಆದರೆ, ವಿಮಾ ಪಾಲಿಸಿಯಿಂದ ನಿಮಗೆ ನಿಜವಾಗಿ ಲಾಭವಾಗಬೇಕಿದ್ದರೆ ನೀವು ಖರೀದಿ ಮಾಡುವ ವಾಹನ ವಿಮಾ ಪಾಲಿಸಿಯನ್ನು ಪೂರೈಸುವಂತಿರಬೇಕು. ಮತ್ತು ಅದು ನಿಮ್ಮ ಎಲ್ಲ ಅಗತ್ಯಗಳನ್ನು ಸಮಗ್ರವಾಗಿ ಪೂರೈಸುವಂತಿರಬೇಕು.

"ನಿಮ್ಮ ಹಣಕಾಸು ಸೌಖ್ಯ ಕಾಯ್ದುಕೊಳ್ಳುವ ಕೆಲಸವನ್ನು ಎಷ್ಟು ಬೇಗ ಆರಂಭಿಸುತ್ತೀರೋ ಅಷ್ಟು ಬೇಗ ನಿಮ್ಮ ಭವಿಷ್ಯವೂ ಭರವಸೆದಾಯಕವಾಗಿರುತ್ತದೆ"


## ನಮ್ಮ ಸೇವೆಗಳು

INSPIRE INDIA WEALTH & PROPERTIES

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ



## ಡಿಸ್ಕ್ಲೈಮರ್

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚ್ವಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ, ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

# ಇನ್ಸ್ಪೈರ್ ಇಂಡಿಯಾ ಟೀಮ್




Sharan C Patil


M G Ishwar


Usha Nanadapurmath


M L Padmanabh


Shivraj Kumar H


Amarnath C


Radha R


Arun Kumar A


Sandeep S P


Vinayak Sulake


Geetha Priya K


Asharani M


P Mohammed Easa


Shashidhar J


Sakshi Patil


Rekha B A


Kavya Manikantha


Ganganna





ಇವರ ಜೊತೆಗೂಡಿ

NJ WEALTH FINANCIAL PRODUCTS DISTRIBUTORS NETWORK

**ಭಾರತದ ಬೃಹತ್**

ಭಾರತದ ಬೃಹತ್ ಮ್ಯುಚ್‌ವಲ್ ಫಂಡ್ ವಿತರಕರಲ್ಲಿ ಒಬ್ಬರು

ಎನ್‌ಜೆ ಆರಂಭವಾಗಿದ್ದು **1994**

ನಮ್ಮ ಸಲಹೆಯಲ್ಲಿರುವ ಆಸ್ತಿಗಳು **1,00,000** ಕೋಟಿಗೂ ಅಧಿಕ

ಎನ್‌ಜೆ ಪಾಲುದಾರರು **38000** ಕ್ಕೂ ಅಧಿಕ

ಎನ್‌ಜೆ ವೆಲ್ತ್‌ನೊಂದಿಗೆ ಮುನ್ನಡೆ ಸಾಧಿಸಿ

ನಾವು ಸಂಪತ್ತಿನ ನಿರ್ಮಾತೃರು ನಾವು ಬದುಕಿನ ಪರಿವರ್ತಕರು

- ಅವಕಾಶಗಳ ಆಗರ
- ಜನರ ಏಳಿಗೆಗೆ ಸಹಾಯ
- ಭವಿಷ್ಯವನ್ನು ಕಟ್ಟಲು ಜನರಿಗೆ ಸಹಕಾರ
- ಹಣಕಾಸಿನ ಪ್ರಗತಿ

## ಎನ್‌ಜೆ ವೆಲ್ತ್‌ನ ವಿಶಿಷ್ಟ 360° ವೇದಿಕೆ

ನಿಮ್ಮ ಸಂಪತ್ತಿನ ಸಂಪೂರ್ಣ ನಿರ್ವಹಣೆಗಾಗಿ
ಸಮಗ್ರ ಹಾಗೂ ವಿಶಿಷ್ಟ ಸೇವೆಗಳು

ಎನ್ ಜೆ ವೆಲ್ತ್ ನ ಪಾರ್ಟ್ನರ್ ಅವರಿಗೆ 360° ಬೆಂಬಲ

- ಮಾರಾಟಕ್ಕೆ ಬೆಂಬಲ
- ಸಂಶೋಧನಾ ಸಹಾಯ
- ತರಬೇತಿಗೆ ಬೆಂಬಲ
- ಮಾರಾಟ ವ್ಯವಸ್ಥೆಗೆ ಬೆಂಬಲ
- ತಂತ್ರಜ್ಞಾನದ ಪರಿಹಾರ ಸೂತ್ರಗಳು
- ಗ್ರಾಹಕರ ಸೇವಾ ಸೌಲಭ್ಯ

## ಮ್ಯುಚ್‌ವಲ್ ಫಂಡ್ ವಿತರಕರಿಗೆ ಅವಕಾಶಗಳು

ಕೇವಲ **2.17** ಕೋಟಿಗೂ ಅಧಿಕ ಭಾರತದಲ್ಲಿರುವ ಮ್ಯುಚ್‌ವಲ್ ಫಂಡ್ ಹೂಡಿಕೆದಾರರು

ಕೇವಲ **1** ಲಕ್ಷಕ್ಕೂ ಅಧಿಕ ಭಾರತದಲ್ಲಿರುವ ಮ್ಯುಚ್‌ವಲ್ ಫಂಡ್ ವಿತರಕರು

ಭಾರತದ ಬೃಹತ್ ಮ್ಯುಚ್‌ವಲ್ ಫಂಡ್ ವಿತರಕರಲ್ಲಿ ಒಬ್ಬರು

**ಈಗ ಜೊತೆಯಾಗಿ**

NJ WEALTH FINANCIAL PRODUCTS DISTRIBUTORS NETWORK

ಹಕ್ಕುತ್ಯಾಗ: ಎನ್‌ಜೆ ಇಂಡಿಯಾ ಇನ್ವೆಸ್ಟ್‌ಮೆಂಟ್ ಪ್ರೈವೇಟ್ ಲಿ. (ಎನ್‌ಜೆ) ಮ್ಯುಚ್‌ವಲ್ ಫಂಡ್ ವಿತರಕರು. ಎನ್‌ಜೆ ಒದಗಿಸುವ ಕೆಲವು ಉತ್ಪನ್ನಗಳು ಮತ್ತು ಸೇವೆಗಳು ಬದಲಾವಣೆಯ ಆಧಾರದಲ್ಲಿ ವ್ಯವಹರಿಸಬಹುದು. ವಿತರಣೆ ಚಟುವಟಿಕೆಗೆ ಸಂಬಂಧಿಸಿದ ಎಲ್ಲ ವಿವಾದಗಳು ಹೂಡಿಕೆದಾರರ ವಿನಿಮಯ ಪರಿಹಾರ ವೇದಿಕೆ ಅಥವಾ ನ್ಯಾಯ ಪಂಚಾಯ್ತಿ ವ್ಯವಸ್ಥೆಯ ವ್ಯಾಪ್ತಿಗೆ ಬರುವುದಿಲ್ಲ. ಇಲ್ಲಿನ ಚಿತ್ರಗಳು/ಅಂಕಿಗಳು/ಮುನ್ನೋಟಗಳು ವಿವರಣೆ ನೀಡುವ ಉದ್ದೇಶಕ್ಕೆ ಮಾತ್ರ ಒಳಪಟ್ಟಿರುತ್ತದೆ. ಭವಿಷ್ಯದಲ್ಲಿ ಪರಿಸ್ಥಿತಿಗಳು/ಫಲಿತಾಂಶಗಳು ನಿಜವಾಗಬಹುದು ಅಥವಾ ಆಗದೇ ಇರಬಹುದು. ಮ್ಯುಚ್‌ವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಗೆ ಸಂಬಂಧಿಸಿದ ಅಪಾಯಕ್ಕೆ ಒಳಪಟ್ಟಿದ್ದಾಗಿದ್ದು ಯೋಜನೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:


**78994 87999**
**95353 66543**

ಇಮೇಲ್: inspireexpress@inspireindiafs.com

ಎನ್ ಜೆ ಎಕ್ಸ್‌ಪ್ರೆಸ್
ಮ್ಯೂಚುಯಲ್ ಫಂಡ್ ವಿತರಕರು
3rd ಫ್ಲೋರ್, ಕಲಬುರ್ಗಿ - ನೂಲ್ವಿ ಮೆಜೆಸ್ಟಿಕ್,
ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ.

ಮೊಟ್ಟ ಮೊದಲನೆಯದಾಗಿ ಈ ಪುಸ್ತಕ ಬರೆಯಲು ಕಾರಣವೇನೆಂದರೆ, ಹೂಡಿಕೆ ಎಂಬುದರ ಅರ್ಥವನ್ನು ಈಗಿನ ಸಂಕೀರ್ಣ ಅರ್ಥಕ್ಕಿಂತ ಒಂದಷ್ಟು ಸರಳೀಕರಿಸುವುದು.

ಹೂಡಿಕೆಯ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದ ಬಹು ಮಂದಿ ನಮ್ಮ ಸುತ್ತಲೂ ಇದ್ದಾರೆ. ನಾವು ಏನನ್ನು ಹೂಡಿಕೆ ಮಾಡುತ್ತಿದ್ದೇವೆ? ಎಷ್ಟು ಹೂಡಿಕೆ ಮಾಡುತ್ತಿದ್ದೇವೆ? ಮತ್ತು ಯಾವುದಕ್ಕಾಗಿ ಹೂಡಿಕೆ ಮಾಡುತ್ತಿದ್ದೇವೆ? ಎಂಬುದೇ ಗೊತ್ತಿಲ್ಲದ ವರ್ಗ ಅದು. ಈ ಪುಸ್ತಕ ಓದಿದ ನಂತರ ನಿಮ್ಮನ್ನು ನೀವು " ಸುಶಿಕ್ಷಿತ ಹೂಡಿಕೆದಾರ" ಎಂದು ಕರೆದುಕೊಳ್ಳಬಹುದು ಎಂಬುದನ್ನು ಖಾತ್ರಿಯಾಗಿ ಹೇಳಬಹುದು.




ಪುಸ್ತಕದ ದರ: Rs. 285/-



Training program



Training program

ಚಿತ್ರ ಸಂಚಯ




Participant feedback at workshop



Award recieved from Anil Kumble at NJ Awards